Sri RAMAKRISHNA HEGDE.—Reason cannot be given.

Sri K. LAKKAPPA.—Has it come to the notice of the Government at any time that the Reserve Bank of India has decided to diminish overdraft capacity of the State?

(*No answer*).

Mr. SPEAKER.—If answer is not given what I am to do? These are all things to be discussed during Budget Discussion. Question No. 220 may be put.

Opening of a Government High School.

*Q.—220. Sri M. N. KRISHNA SINGH (Jagalur).—

Will the Government be pleased to state:—

(*a*) whether it has come to their notice that there is no Government High School in Bilichodu village in Jagalur Taluk although the said village is a Hobli Headquarters;

(*b*) whether they intend to open a Government High School there since the villagers are unable to open a rural High School?

A—Sri S. R. KANTHI (Minister for Education).—

(*a*) Yes.

(*b*) No. There is a High School at a distance of 3 miles.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಜಗಳೂರು ತಾಲ್ಲೂಕಿನಲ್ಲಿರುವ ಬಿಳಿಚೋಡು ಗ್ರಾಮವು ಹೋಬಳಿಯ ಮುಖ್ಯ ಸ್ಥಳವಾಗಿದ್ದರೂ ಕೂಡ ಅಲ್ಲಿ ಸರ್ಕಾರಿ ಪ್ರೌಢ ಶಾಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ ಕ್ಕೆ ಬಂದಿದೆ ಎಂದು ಉತ್ತರ ಹೇಳಿದೆ. ಹಾಗಾದರೆ ಗಮನಕ್ಕೆ ಬಂದ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ?

† ಶ್ರೀ ಎಸ್. ಆರ್. ಕಂಠಿ.—ಸರಕಾರ ಶಾಲೆ ಕೊಡುವ ಪದ್ಧತಿ ಇಟ್ಟುಕೊಂಡಿಲ್ಲ, ತಾಲ್ಲೂಕು ಬೋರ್ಡು ಶಾಲೆ ಪ್ರಾರಂಭ ಮಾಡುವುದಾದರೆ ಅದಕ್ಕೆ ಪರ್ಮಿಷನ್ ಕೊಡುತ್ತೇವೆ. ಅದರೆ ಅವರು ಮಾಡಿಲ್ಲ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಪಾಠಶಾಲೆ ಕೊಡಬೇಕೆಂದು ತಾಲ್ಲೂಕು ಬೋರ್ಡು ಪ್ರಾರ್ಥನೆ ಕಳಿಸಿದ್ದಾರಲ್ಲವೇ?

ಶ್ರೀ ಎಸ್. ಆರ್. ಕಂಠಿ—ಪ್ರಾರ್ಥನೆ ಕಳಿಸಿದರೆ ಶಾಲೆ ಕೊಡುವುದಕ್ಕಾಗುವುದಿಲ್ಲ. ಅಂಥ ಪ್ರಾರ್ಥನೆಗಳು ಬೇಕಾದಷ್ಟು ಬಂದಿವೆ. ಸರಕಾರ ಕೊಡುವುದಕ್ಕೆ ಸಾಧ್ಯವಿಲ್ಲ.

Sri K. LAKKAPPA.—Is it the policy of the Government not to start Government High Schools anywhere in the State?

ಶ್ರೀ ಎಸ್. ಆರ್. ಕಂಠಿ.—ಈ ಬಾಬಿಗೆ ಅಲಾಟ್‌ಮೆಂಟ್ ಇರುವುದು ಬಹಳ ಕಡಿಮೆ. ಎಲ್ಲಾ ಕಡೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಅಲಾಟ್‌ಮೆಂಟ್ ಇರುವುದನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಬೈರಾಪ್ಪಾಜಿ.—ಬಿಳಿಚೋಡು ಗ್ರಾಮವು ಹೆಡ್‌ಕ್ವಾರ್ಟರ್ಸ್ ಆಗಿರುವುದರಿಂದ ತಾಲ್ಲೂಕು ಬೋರ್ಡಿಗೆ ಅಗಲಿ ಹೈವೇಟ್ ಏಜೆನ್ಸಿ ಆಗಲಿ ಪ್ರೌಢ ಶಾಲೆ ನಡೆಸುವುದಕ್ಕೆ ಪರ್ಮಿಷನ್ ಕೊಡುವುದರಿಂದ ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ಬಾಲಕರು ಹೆಚ್ಚು ಸಂಖ್ಯೆಯಲ್ಲಿ ಇರುವುದರಿಂದ ಸರಕಾರ ಅಲ್ಲಿ ಪ್ರೌಢ ಶಾಲೆ ಪ್ರಾರಂಭ ಮಾಡುವುದು ಕರ್ತವ್ಯ ಅಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಸರಕಾರ ಮಾಡಬೇಕಾದ ಕರ್ತವ್ಯ ಬೇಕಾದಷ್ಟು ಇವೆ. ಅವೆಲ್ಲಾ ಆಗಬೇಕಲ್ಲಾ! ಹತ್ತಿರದ ಊರಿಗೆ ಒಂದು ಪ್ರೌಢ ಶಾಲೆ ಕೊಟ್ಟಿದೆ.

1-30 P.M.

ಶ್ರೀ ಟಿ. ದಾಡಪ್ಪಗೌಡ.—ಸರ್ಕಾರದ ಪಾಠಶಾಲೆಗಳನ್ನು ತೆರೆಯುವದು ಸರ್ಕಾರದ ಕರ್ತವ್ಯವಲ್ಲ ಎಂದು ಮಂತ್ರಿಗಳು ಈಗತಾನೆ ಅಪ್ಪಣೆ ಕೊಡಿಸಿದರು. ಹಾಗಾದರೆ ಕಳೆದ ಮೂರು ವರ್ಷಗಳಲ್ಲಿ ಸರಕಾರವತಿಯಿಂದ ಎಷ್ಟು ಯಾವ ಸ್ಕೂಲುಗಳನ್ನು ತೆರೆದಿಲ್ಲವೇ ?

ಶ್ರೀ ಎಸ್. ಆರ್. ಕಂತಿ.—ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಉತ್ತರವನ್ನು ಒದಗಿಸುವಾಗುವದು.

ಶ್ರೀ ಎಂ. ಸಿ. ಬಸಪ್ಪ.—ಮುಂದಿನ ಸಾಲಿನಲ್ಲಿ ಎಲ್ಲೆಲ್ಲಿ ಈ ಶಾಲೆಗಳನ್ನು ಮಾಡಲು ಹಣವನು ಎಷ್ಟೆಷ್ಟು.....

Mr SPEAKER.—The Hon'ble Member wants to discuss the Budget !

Sri M. C. BASAPPA.—I want to know the programme for the year on this particular sub-head.

Sri S. R. KANTHI.—The programme is not as yet ready. It will be placed in the hands of the members soon after it is ready.

ಶ್ರೀ ಎಂ. ಎನ್. ಕೃಷ್ಣ ಸಿಂಗ್.—ಅಂಥ ಅವಕಾಶಗಳಿದ್ದರೆ ಮುಂದಿನ ಸಾಲಿನಲ್ಲಿ ಇಲ್ಲಿಗೆ ಒಂದು ಹೈ ಸ್ಕೂಲನ್ನು ಒದಗಿಸುತ್ತೀರಾ ?

ಶ್ರೀ ಎಸ್. ಆರ್. ಕಂತಿ.—ಅಂಥ ಪ್ರಸಂಗ ಬಂದರೆ ನೋಡೋಣ.

Non-availability of Text Books.

*Q.—266. Sri R. KENCHAPPA (Pavagada).—

Will the Government be pleased to state :—

(*a*) the names of books which were prescribed for different classes of middle and high schools of Tumkur District which were not supplied so far ;

(*b*) the reason for the same ;

(*c*) whether they are aware of the inconveniences caused to the students on account of the non-availability of the text books ?

A.—Sri S. R. KANTHI (Minister for Education).—

(*a*) names of the books not available upto August 1965.

			Standard
1	English Non-detailed Text	..	X
2	Comp. English ...	...	V
3	Comp. English ...	...	VI
4	Comp. English ...	...	VII
5	General Science (Kannada Medium)	..	III
6	do	...	IV
7	do	...	V
8	do	...	VI
9	do	...	VII
10	Social Studies (Kannada Medium)	...	V
11	do	...	VII
12	General Mathematics	...	V
13	Optional Chemistry (Kannada Medium)	...	IX
14	do (English Medium)	...	IX